ಇಂದು ದಿನಾಂಕ **11-12-2023** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 3 ಮತ್ತು 4 ನೇ ಪ್ರತಿವಾದಿಗಳ ಪರ ವಕೀಲರಿಂದಃ**

ನಾನು ಲೋಕೂರ ನಿವಾಸಿಯಾಗಿರುತ್ತೇನೆ. ನಾನು ನವಲೂರಿನಲ್ಲಿ ಸುಮಾರು 6 ವರ್ಷ ವಾಸ ಇದ್ದೆ, ಕಳೆದ 2 ವರ್ಷಗಳಿಂದ ಲೋಕೂರನಲ್ಲಿ ವಾಸ ಇರುತ್ತೇನೆ. ನವಲೂರಿನ ನನ್ನ ಮಾವ ಬಸರೂರ ಎನ್ನುವವರ ಮನೆಯಲ್ಲಿ ವಾಸ ಇದ್ದೆನು. ಅವರ ಮನೆಯಲ್ಲಿಯೇ ನಾನು ಕೆಲಸ ಮಾಡಿಕೊಂಡು ಇದ್ದೇನು. ಅವರ ಮನೆಯು ವಿಠೋಬ ದೇವಸ್ಥಾನದ ಹತ್ತಿರ ಇರುತ್ತದೆ. ಯಲ್ಲವ್ವಳ ಮನೆ ಊರಿನಲ್ಲಿ ಇರುತ್ತದೆ ಎಂದರೆ ನಿಜ. ನನಗೆ ಖುದ್ದಾಗಿ ಯಲ್ಲವ್ವಳ ಪರಿಚಯ ಇತ್ತು. ಯಲ್ಲವ್ವ ಸುಮಾರು 5 ವರ್ಷಗಳ ಹಿಂದೆ ಮೃತಪಟ್ಟಿದ್ದು ಆ ಸಮಯದಲ್ಲಿ ನಾನು ನವಲೂರಿನಲ್ಲಿಯೇ ವಾಸ ಇದ್ದೆ. ಅವಳ ಮರಣ ದಿನಾಂಕ ಹೇಳಲು ಬರುವುದಿಲ್ಲಾ. ಮೃತ್ಯು ಪತ್ರ ವನ್ನು ದಿಃ 25-07-2018 ರಂದು ಮಾಡಿರುತ್ತಾಳೆ. ಸದರೀ ಮೃತ್ಯು ಪತ್ರದ ಮರುದಿನವೇ ಯಲ್ಲವ್ವ ಮೃತಪಟ್ಟಿರುತ್ತಾಳೆ ಎಂದರೆ ನಿಜ.

ಮೃತ್ಯು ಪತ್ರದ ಸಮಯದಲ್ಲಿ ನಾನು, ಲಕ್ಷ್ಮಣ, ಯಲ್ಲಪ್ಪ ಗೌಡರ, ಮಂಜುನಾಥ ಮತ್ತು ಯಲ್ಲವ್ವ ಹಾಜರಿದ್ದೆವು. ಮೃತ್ಯು ಪತ್ರ ಬರೆಯಲು ಯಾರು ಮಾಹಿತಿ ನೀಡಿದರು ಎಂದು ನನಗೆ ಗೊತ್ತಿಲ್ಲಾ. ಮೃತ್ಯು ಪತ್ರ ಸಿದ್ದಪಡಿಸುವಾಗ ನಾನು ಹಾಜರಿದ್ದೆನು. ಅದನ್ನು ಒಬ್ಬ ವಕೀಲರು ಬರೆದಿರುತ್ತಾರೆ. ವಕೀಲರಿಗೆ ಯಾರು ಮಾಹಿತಿ ನೀಡಿದ್ದರು ಎಂದು ನನಗೆ ಗೊತ್ತಿಲ್ಲಾ. ಅದೇ ರೀತಿ ವಕೀಲರು ಖುದ್ದಾಗಿ ತಾವೇ

ತಮ್ಮ ಮಾಹಿತಿಯಿಂದ ಮೃತ್ಯು ಪತ್ರ ಬರೆದಿರುತ್ತಾರೋ ಏನೋ ಎಂದು ನನಗೆ ಗೊತ್ತಿಲ್ಲಾ. ವಕೀಲರಿಗೆ ಕಾಗದ ಪತ್ರಗಳನ್ನು ತರಲು ಯಲ್ಲವ್ವಳೇ ಹಣ ನೀಡಿದ್ದಳು ಎಂದು ನನಗೆ ಗೊತ್ತಾಗಿರುತ್ತದೆ.

ಮೃತ್ಯು ಪತ್ರಕ್ಕೆ ಸಹಿ ಮಾಡಲು ಬರುವಂತೆ ನನಗೆ ಯಲ್ಲವ್ವಳೇ ಖುದ್ದಾಗಿ ಬಂದು ಕರೆದಿದ್ದಳು. ಮೃತ್ಯು ಪತ್ರವನ್ನು ಯಾರು ಮತ್ತು ಎಲ್ಲಿ ಸಿದ್ದಪಡಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲಾ. ಮೃತ್ಯು ಪತ್ರಕ್ಕೆ ನಾನು ಹಳೆಯ ನ್ಯಾಯಾಲಯದ ಆವರಣದಲ್ಲಿ ಸಹಿ ಮಾಡಿರುತ್ತೇನೆ. ಮೃತ್ಯು ಪತ್ರದಲ್ಲಿ 5 ಎಕರೆ ಚಿಲ್ಲರೇ, 2 ಎಕರೆ ಚಿಲ್ಲರೇ ಹಾಗೂ ಇನ್ನೂ ಒಂದು 2 ಎಕರೆ ಚಿಲ್ಲರೇ ಜಮೀನುಗಳನ್ನು ನಮೂದಿಸಿರಲಾಗಿರುತ್ತದೆ ಆದರೆ ನನಗೆ ಅವುಗಳ ಸರ್ವೆ ನಂಬರಗಳನ್ನು ಹೇಳಲು ಬರುವುದಿಲ್ಲಾ. ನನಗೆ ಓದಲು ಬರುವುದಿಲ್ಲವಾದ್ದರಿಂದ ಮೃತ್ಯು ಪತ್ರವನ್ನು ಓದಿರುವುದಿಲ್ಲಾ. ಅದೇ ರೀತಿ ನಾನು ಅದನ್ನು ಓದಿಸಿ ತಿಳಿದುಕೊಂಡಿರುವುದಿಲ್ಲಾ. ಮೃತ್ಯು ಪತ್ರಕ್ಕೆ ನಾನು ಸಹಿ ಮಾಡು ಎಂದು ಹೇಳಿದ್ದರಿಂದ ಸಹಿ ಮಾಡಿರುತ್ತೇನೆ. ನಾವು ಒಟ್ಟು 4 ಜನ ಮೃತ್ಯು ಪತ್ರಕ್ಕೆ ಸಹಿ ಮಾಡಿರುತ್ತೇವೆ.

ಯಲ್ಲವ್ವ ಮೃತಪಡುವ ಸುಮಾರು 15 ದಿನಗಳ ಪೂರ್ವದಿಂದ ಹಾಸಿಗೆ ಹಿಡಿದಿದ್ದಳು ಎಂದರೆ ನನಗೆ ಗೊತ್ತಿಲ್ಲಾ, ಸಾಕ್ಷಿ ಮುಂದುವರೆದು ಅವಳು ಓಡಾಡಿಕೊಂಡು ಇದ್ದಳು ಎಂದು ಹೇಳುತ್ತಾರೆ. ಅವಳಿಗೆ ಸುಮಾರು 72 ವರ್ಷ ವಯಸ್ಸು ಆಗಿತ್ತು.

ವಾದಿ ತಡಸಿನಕೊಪ್ಪ ಗ್ರಾಮದವರು. ಸುಮರು 5 ವರ್ಷಗಳಿಂದ ನನಗೆ ವಾದಿಯ ಪರಿಚಯ ಇರುತ್ತದೆ. ನಾನು ಹಾಗೂ ವಾದಿ ಪರಸ್ಪರ ಒಬ್ಬರ ಮಾತು ಒಬ್ಬರು ಕೇಳುತ್ತೇವೆ ಎನ್ನುವುದು ಸರಿಯಲ್ಲಾ. ವಾದಿ ನನಗೆ ಬೇಕಾದವನು ಆದ ಕಾರಣ ಆತನಿಗೆ ಸಹಾಯ ಮಾಡಲು

ಸಿದ್ದಪಡಿಸಿದ್ದ ಮೃತ್ಯು ಪತ್ರಕ್ಕೆ ಯಾವುದೇ ಮಾಹಿತಿ ಇಲ್ಲದೇ ಸಹಿ ಮಾಡಿ ಆತನ ಪರ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲಾ.

ಮೃತ್ಯು ಪತ್ರಕ್ಕೆ ನಾವೇಲ್ಲಾ ಸಹಿ ಮಾಡಿದ ನಂತರ ಅದನ್ನು ಮೇಟಿ ವಕೀಲರು ತಮ್ಮ ಬಳಿ ಇಟ್ಟುಕೊಂಡರು. ನಂತರ ಅವರು ಮೃತ್ಯು ಪತ್ರವನ್ನು ಯಾರಿಗೆ ಕೊಟ್ಟರು ಎಂದು ನನಗೆ ಗೊತ್ತಿಲ್ಲಾ. ಮೃತ್ಯು ಪತ್ರಕ್ಕೆ ಸಹಿ ಮಾಡಲು ಯಲ್ಲವ್ವ ನನಗೆ ಕರೆದಿಲ್ಲಾ ಹಾಗೂ ಸದರೀ ಮೃತ್ಯು ಪತ್ರಕ್ಕೆ ಯಲ್ಲವ್ವ ಮಾಹಿತಿ ಸಹ ನೀಡಿಲ್ಲಾ ಎನ್ನುವುದು ಸರಿಯಲ್ಲಾ. ಮೃತ್ಯು ಪತ್ರಕ್ಕೆ ಯಲ್ಲವ್ವ ತನ್ನ ಹೆಬ್ಬಟ್ಟಿನ ಸಹಿ ಮಾಡಿಲ್ಲಾ ಎಂದರೆ ಸರಿಯಲ್ಲಾ. ಮೃತ್ಯು ಪತ್ರವನ್ನು ನಾವೇಲ್ಲಾ ಸೇರಿ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲಾ. ಯಲ್ಲವ್ವಳು 1, 3 ಮತ್ತು 4 ನೇ ಪ್ರತಿವಾದಿಯರಿಗೆ ಮೃತ್ಯು ಪತ್ರವನ್ನು ಬರೆದುಕೊಟ್ಟಿದ್ದು ನಾವು ಖೊಟ್ಟಿ ಮೃತ್ಯು ಪತ್ರವನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲಾ. ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲಾ.

**(1, 5 ಮತ್ತು 6 ನೇ ಪ್ರತಿವಾದಿಯರು ಪರ ವಕೀಲರು ಗೈರು ಹಾಜರು ಇದ್ದು ಯಾರು ಪ್ರತಿನಿಧಿಸಿಲ್ಲವಾದ್ದರಿಂದ ಅವರ ಪರ ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ.

ಪ್ರ ಹಿ ದಿ ನ್ಯಾ ಹಾಗೂ ಸಿಜೆಎಂ
ಧಾರವಾಡ